ಒಂದು ವರ್ಷದಲ್ಲಿ ಸ್ಟೂಡೆಂಟ್ಸ್ ಅನರಸ್ಟ್ ಇಲ್ಲ. ಕ್ಯಾಂಪಸ್ ಶಾಂತವಾಗಿದೆ. ಈ ಗಲಾಟೆಗಳ ಎರಡು ಇನ್ಸಿಡೆಂಟ್ಸ್ ಬಿಟ್ಟರೆ ವಿದ್ಯಾರ್ಥಿಗಳ ಬಗ್ಗೆ ತಿಳಿದ ಮಟ್ಟಿಗೆ ಪರಿಸ್ಥಿತಿ ಸಂಪೂರ್ಣ ಶಾಂತವಾಗಿದೆ. ಆದ್ದರಿಂದ ಈಗ ತಾವು ಏನು ಹೇಳಿದ್ದೀರಿ, ವೈಸ್ ಚಾನ್ಸಲರನ್ನು ತೆಗೆದು ಹಾಕುವುದು ಎಂದು, ಅವರನ್ನು ತೆಗೆದುಹಾಕುವುದಕ್ಕೆ ಆಗುವುದಿಲ್ಲ ಏಕೆಂದರೆ, ಅದಕ್ಕೆ ಕಾನೂನು ಪ್ರಕಾರವೇ ಮಾಡಬೇಕಾಗುತ್ತದೆ. ಅದಕ್ಕೂಸ್ಕರ ಎರಡು ವಿಷಯದಲ್ಲಿ ಈಗಾಗಲೇ ನಾನು ಗಮನಹರಿಸಿದ್ದೇನೆ. ಆದರೆ ರಾಮದಾಸ್ ಮತ್ತು ಗೋವಿಂದಯ್ಯನವರಿಗೆ ಸಸ್ಪೆಂಡ್ ಮಾಡಿರುವ ಬಗ್ಗೆಯಾಗಲಿ ಮತ್ತು ಷೋಕಾಸ್ ನೋಟಿಸ್ ಇಶ್ಯೂ ಮಾಡಿರುವ ಬಗ್ಗೆಯಾಗಲೀ ನನಗೆ ಗೊತ್ತಿಲ್ಲ. ಅದನ್ನು ವಿಚಾರ ಮಾಡುತ್ತೇವೆಂದು ಮಾನ್ಯ ಅಧ್ಯಕ್ಷರ ಮೂಲಕ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಇಷ್ಟೆ, ನಾನು ಈ ವಿಷಯಗಳ ಬಗ್ಗೆ ಮಾತನಾಡಿದಾಗ ನೀವು ಇಲ್ಲಿ ಏಕೆ ನೋಟಿಸ್ ಕೊಟ್ಟಿದ್ದಾರೆ, ಏನು ಕಾರಣ ಎನ್ನುವುದರ ಬಗ್ಗೆ ವಿವರಗಳನ್ನು ಸಂಪೂರ್ಣವಾಗಿ ಹೇಳಿದ್ದೇನೆ. ದಾಖಲೆ ತರಿಸಿಕೊಂಡು ಹೇಳಿದ್ದೇನೆ. ದಿನಾಂಕ 08-01-96ರಂದು ಗಾಂಧೀಭವನದಲ್ಲಿ ಗಾಂಧೀ ವಿಚಾರಧಾರೆಗಳ ಸಮಕಾಲೀನ ಪ್ರಸ್ತುತೆ ಬಗ್ಗೆ ವಿಚಾರ ಸಂಕಿರಣ. ಅದನ್ನು ನಡೆಸಬೇಕೆಂದು ಇವರು ಅರ್ಜಿ ಕೊಟ್ಟಾಗ ಇವರು ನಿರಾಕರಣೆ ಮಾಡಿದ್ದಾರೆ. ನಿರಾಕರಣೆ ಮಾಡಿರುವುದು ತಪ್ಪು ಎಂದು ಹೇಳಿ ಅವರು ಧರಣಿ ಕುಳಿತಿದ್ದಾರೆ. ಅದಕ್ಕೂಸ್ಕರ ವಿಶ್ವವಿದ್ಯಾನಿಲಯಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದೀರಿ ಎಂದು ಹೇಳಿ ಇವರಿಗೆ ಶೋಕಾಸ್ ನೋಟಿಸ್ ಕೊಟ್ಟು ಅದರ ಪ್ರಕಾರ ಸಸ್ಪೆಂಡ್ ಮಾಡಬೇಕು ಎಂದು ಹೇಳಿ 02-03-96ರಲ್ಲಿ ಅದನ್ನು ರ್ಯಾಟಿಫೈ ಮಾಡಲಿಕ್ಕೆ ಸಿಂಡಿಕೇಟ್ ಮೀಟಿಂಗನಲ್ಲಿ ಈ ವಿಚಾರವನ್ನು ತಂದಾಗ ಈ ಘರ್ಷಣೆಯಾಗಿದೆ. ಅದನ್ನು ಆ ದಿನ ರದ್ದು ಮಾಡಿದ್ದಾರೆ. ಇನ್ನೊಂದು ಡಾ: ಮಹದೇವ ಅವರ ಮಗಳ ಬಗ್ಗೆ ನೀವು ಏನು ಹೇಳಿದ್ದೀರಿ.....

MR. SPEAKER : Please do not drag the discussion.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆದ್ದರಿಂದ ನಾನು ಹೇಳುವುದು ಇಷ್ಟೆ, ಕೆ.ಕೆ. ಮಿಶ್ರಾರವರ ತನಿಖೆ ದಯವಿಟ್ಟು ಬೇಡ.

5. ಸ್ಪಾಪ್ ಗ್ಯಾಟ್ ಉಪನ್ಯಾಸಕರಿಗೆ ಬಾಕಿ ವೇತನ ನೀಡುವಲ್ಲಿ ಹಾಗು ಅವರನ್ನು ಖಾಯಂ ಮಾಡುವಲ್ಲಿ ಆಗಿರುವ ಅವ್ಯವಹಾರ.

MR. SPEAKER : Let the report come ಎಂದು ಹೇಳಿದ್ದಾರೆ. Please do not.....

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೇ, ಒಂದು ಅತ್ಯಂತ ಪ್ರಮುಖವಾದಂಥ ವಿಚಾರವನ್ನು ನಿಯಮ 351ರ ಅಡಿಯಲ್ಲಿ ಎತ್ತಬೇಕೆಂದು ನಾನು ಪ್ರಯತ್ನ

ಪಟ್ಟಿ. ಇದು ಕೊನೆಯ ದಿವಸ ಮತ್ತು ಕೊನೆಯ ಗಳಿಗೆಯಾಗಿರುವುದರಿಂದ ಹೆಚ್ಚಿನ ಸಮಯ ನನಗೆ ಸಿಗಲಾರದು. ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಬಹುಶ: ನನ್ನ ಪ್ರಶ್ನೆಯನ್ನು ಅವರು ನೋಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಏಕೆಂದರೆ ಪ್ರಶ್ನೆಗೂ ಮತ್ತು ಉತ್ತರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಬಹುಶ: ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಕೆಲವು ಅಧಿಕಾರಿಗಳು ಮಂತ್ರಿಗಳನ್ನು ಮತ್ತು ಈ ಸದನವನ್ನು ಯಾವ ರೀತಿ ತಪ್ಪು ದಾರಿಗೆ ಎಳೆಯುತ್ತಾರೆ ಎನ್ನುವುದಕ್ಕೆ ಇದೊಂದು ನಿದರ್ಶನ. ಈ ರೀತಿಯ ತಪ್ಪು ಹೇಳಿಕೆಗಳನ್ನು ಕೊಟ್ಟಾಗ ಸದನದಲ್ಲಿ ಮಂತ್ರಿಗಳ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಒಂದು ಕಠಿಣವಾದಂಥ ಒಂದು ಕಾನೂನನ್ನು ನಾವು ಅಳವಡಿಸಿಕೊಂಡಿದ್ದೇವೆ ಎನ್ನುವ ವಿಚಾರ ಅಧಿಕಾರಗಳ ಗಮನಕ್ಕೆ ಬಂದಿದ್ದರೆ ಬಹುಶ: ಈ ರೀತಿಯ ತಪ್ಪು ಹೇಳಿಕೆಗಳನ್ನು ಮಂತ್ರಿಗಳ ಮುಖಾಂತರ ಅವರು ಮಾಡಿಸುವುದಿಲ್ಲ ಎಂದು ನಾನು ತಿಳಿದುಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ರಾಜ್ಯದ ವಿವಿಧ ಅನುದಾನಿತ ಖಾಸಗಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದು ದಿನಾಂಕ 29-01-92ರ ಸುಪ್ರೀಂ ಕೋರ್ಟಿ ತೀರ್ಮಾನದನ್ವಯ ಮೂರು ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸಿರುವ ಸ್ಪಾಪ್‌ಗ್ಯಾಪ್ ಉಪನ್ಯಾಸಕರುಗಳಿಗೆ ಕೊಡಬೇಕಾಗಿದ್ದ ಸಂಬಳ ಬಾಕಿ ನೀಡುವಲ್ಲಿ ಹಾಗೂ ಖಾಯಂ ಮಾಡುವಲ್ಲಿ ಆಗಿರುವ ಅನ್ಯಾಯದ ಬಗ್ಗೆ ತನಿಖೆ ನಡೆಸುವ ಬಗ್ಗೆ ಎಂದು ಮುಂದೆ ವಿವರಗಳಿವೆ, ಸಮಯ ಹೆಚ್ಚಿಗೆ ಇಲ್ಲದಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಇಷ್ಟು ವಿಷಯ ನನ್ನ ಮೊದಲನೇ ಪ್ಯಾರಾದಲ್ಲಿರತಕ್ಕಂಥದ್ದು. ಆದರೆ ಅವರು ಯಾವುದೋ ರೀತಿಯಲ್ಲಿ ಉತ್ತರವನ್ನು ಕೊಟ್ಟು ಬಹುಶ: ಪ್ರಶ್ನೆಗಳನ್ನು ಕೇಳತಕ್ಕಂಥ ಶಾಸಕರೂ ಕೂಡ ಏನೂ ತಿಳುವಳಿಕೆಯಿಲ್ಲದೇ ಯಾರೋ ಹೇಳಿದಂಥ ಒಂದು ಪ್ರಶ್ನೆಯನ್ನು ಕೇಳಿಬರುತ್ತಾರೆ ಎನ್ನುವ ಭಾವನೆ ಅಧಿಕಾರಿಗಳಿಗೆ ಇರಬಹುದು, ಅಥವಾ ಏನಾದರೂ ಉತ್ತರ ಕೊಟ್ಟರೂ ಕೂಡ ಸದನದಲ್ಲಿ ನಡೆದುಹೋಗುತ್ತದೆ, ಏಕೆಂದರೆ ಇವೊತ್ತು ಕೊನೆಯ ದಿವಸ ಬೇರೆ, ಆದ್ದರಿಂದ ಇದನ್ನು ಹ್ಯಾಗಾದರೂ ತಳ್ಳಬಹುದು ಏನ್ನುವ ಭಾವನೆ ಅವರಲ್ಲಿರಬಹುದು. ಇಂಥ ಅಧಿಕಾರಿಗಳ ಹೆಸರನ್ನೂ ಕೂಡ ಸದನದಲ್ಲಿ ಹೇಳುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ಕಠಿಣವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ, ಒಂದೆರಡು ಅಧಿಕಾರಿಗಳ ಬಗ್ಗೆ ಈ ರೀತಿ ತಾವು ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೆ ಬಹುಶ: ಈ ಇಲಾಖೆಯನ್ನು ಸರಿಪಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ವಿದ್ಯಾ ಇಲಾಖೆ ಎಂದರೆ ತಾವು ಏನು ತಿಳಿದುಕೊಂಡಿದ್ದಿರೋ ಅಥವಾ ಈ ಅಧಿಕಾರಿಗಳು ಏನು ಭಾವನೆ ಮಾಡಿಕೊಂಡಿದ್ದಾರೋ ಅದು ನನಗೆ ಗೊತ್ತಿಲ್ಲ; ಆದರೆ ನಮ್ಮ ಭಾವನೆಯಲ್ಲಿ ವಿದ್ಯಾ ಇಲಾಖೆ ಎಂದರೆ ಅದು ಸರಸ್ವತಿ ಮಂದಿರ, ಅದಕ್ಕೆ ಅಷ್ಟೊಂದು ಗೌರವ ಇರತಕ್ಕಂಥ ಜಾಗದಲ್ಲಿ ಇಂಥ ಅವ್ಯವಹಾರಗಳು, ಅತ್ಯಾಚಾರಗಳು, ಅನಾಚಾರಗಳು ನಡೆಯಬಾರದು. ಇವೊತ್ತು ಸರ್ಕಾರಕ್ಕೆ ಸುಮಾರು ಕೋಟ್ಯಾಂತರ ರೂಪಾಯಿಗಳ ನಷ್ಟ ಬರತಕ್ಕಂಥ ಒಂದು ವ್ಯವಹಾರ. ಜೀವ ಇದ್ದವರಿಗೆ ಇದರಲ್ಲಿಲ್ಲ, ಸತ್ತಂಥವರಿಗೆ ಹಣ ಕೊಡತಕ್ಕಂಥ ಒಂದು ವ್ಯವಸ್ಥೆ. ಇದರಲ್ಲಿ 9 ಅಥವಾ 10

ಪಾಯಿಂಟ್‌ಗಳಿವೆ, ಪಾಯಿಂಟ್‌ಗಳನ್ನು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ಎಲ್ಲಾ ದಾಖಲಾತಿಗಳನ್ನು ತಮಗೆ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಸುಪ್ರೀಂ ಕೋರ್ಟ್ ಆದೇಶದನುಸಾರ ದಿನಾಂಕ 29-01-92 ಮತ್ತು 31-08-94ರವರೆಗೆ ಮೂರು ವರ್ಷಗಳಿಂದ ಕಡಿಮೆ ಸೇವೆ ಸಲ್ಲಿಸಿರುವ ಪೂರ್ಣಕಾಲಿಕ ಸ್ಪಾಪ್ ಗ್ಯಾಪ್ ಉಪನ್ಯಾಸಕರಾದ 305 ಮಂದಿಗೆ ಬಾಕಿ ವೇತನ ಬಿಡುಗಡೆ ಮಾಡಿರುವುದು ಸರಿಯಷ್ಟೆ. ಒಬ್ಬ ಉಪನ್ಯಾಸಕಗೆ ಸುಮಾರು 1.04 ಲಕ್ಷ ರೂಪಾಯಿ ಬರುತ್ತದೆ. ಸುಮಾರು 4 ಕೋಟಿ 25 ಲಕ್ಷ ಆಗಬಹುದು. ಇದಲ್ಲದೆ ಸರ್ಕಾರ ಎರಡನೇ ಹಂತಕ್ಕೆ ಅಂದರೆ ದಿನಾಂಕ 01-09-94 ರಲ್ಲಿ ಫೆಬ್ರವರಿ 1996ರ ಕೊನೆಯವರೆಗೆ ಬಾಕಿ ವೇತನವನ್ನು ಬಿಡುಗಡೆ ಮೊದಲು ಆದೇಶಿಸಿದೆ. ಅಂದರೆ ಸುಮಾರು 2.25 ಕೋಟಿ ರೂಪಾಯಿಗಳು. ಆದರೆ 305ರ ಪಟ್ಟಿಯನ್ನು ಮೂರು ಬೇರೆ ಬೇರೆ ಅನುಬಂಧಗಳಲ್ಲಿ ಪ್ರತಿ ಪ್ರಾದೇಶಿಕ ಕಛೇರಿಗೆ ಸಂಬಂಧಿಸಿದಂತೆ ತಯಾರಿಸಿ ಅರ್ಹ ಉಪನ್ಯಾಸಕರನ್ನು ಕೈಬಿಟ್ಟು ಅನರ್ಹ, ಮರಣ ಹೊಂದಿರುವ ಹಾಗೂ ಸೇವೆಯಲ್ಲಿ ಇರದ ಉಪನ್ಯಾಸಕರಿಗೆ ಹಣ ಬಿಡುಗಡೆ ಮಾಡಲು ಕಾಲೇಜು ಶಿಕ್ಷಣ ನಿರ್ದೇಶನಾಲಯದಿಂದ ಆದೇಶಿಸಿರುವುದು ಯಾವ ಆಧಾರದ ಮೇಲೆ? ಈ ಅನುಬಂಧಗಳನ್ನು ತಯಾರಿಸಿ ಲಕ್ಷಾಂತರ ರೂಪಾಯಿಗಳನ್ನು ಅಮಾಯಕ ಉಪನ್ಯಾಸಕರಿಂದ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಯೇ? ಈ ಗೊಂದಲಕ್ಕೆ ಕಾರಣಕರ್ತರಾಗಿರುವ ಅಧಿಕಾರಿಗಳು ಯಾರು? ಇವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ? 305 ಪಟ್ಟಿಯಲ್ಲಿ ಸೇರಿಸಿರುವ ನಕಲಿ ಉಪನ್ಯಾಸಕರನ್ನು ಹಾಗೂ 305 ಪಟ್ಟಿಯಲ್ಲಿ ಸೇರಿಸದೇ ಇರುವ ಅರ್ಹ ಉಪನ್ಯಾಸಕರನ್ನು ಪತ್ತೆ ಹಚ್ಚಲು ಸರ್ಕಾರ ನೇಮಿಸಲು ಡಾ|| ಎಸ್. ಗುರುಮೂರ್ತಿ, ಏಕ ಸದಸ್ಯ ತನಿಖಾ ಅಧಿಕಾರಿಯ ವರದಿ ಏನಾಯಿತು? ಇದಕ್ಕೆ ಒಂದು ವರದಿಯನ್ನು ತರಿಸಿದ್ದಾರೆ. ಆದರೆ ಆ ವರದಿ ಏನಾಯಿತು ಎಂದು ಇನ್ನೂ ಗೊತ್ತಿಲ್ಲ. ಆ ವರದಿ ಸರ್ಕಾರದ ಹತ್ತಿರ ಇದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ನನ್ನ ಹತ್ತಿರ ಮಾತ್ರ ಇದೆ. ಸರ್ಕಾರ ಇದನ್ನು ಹೊರ ಹಾಕದಿದ್ದರೆ ನಾನು ಇದನ್ನು ಸದನದಲ್ಲಿ ತಮಗೆ ಕೊಡುವವನಿದ್ದೇನೆ. ಈ ವರದಿಯನ್ನು ತರಿಸಿ ನೋಡಬೇಕು, ಈ ವರದಿಯಲ್ಲಿ ಏನಿದೆ....

ಅಧ್ಯಕ್ಷರು : ಅದಿರಲಿ, ಈಗ ಬಹಳ ದೀಟೈಲ್ಸ್ ಆಗಿಹೋಗಿದೆ.

ಶ್ರೀ ಬಿ.ಬಿ. ಶಿವಪ್ಪ : ಇನ್ನೇನು ಹೇಳಿ ಮುಗಿಸಿಬಿಡುತ್ತೇನೆ, ಡಾ:ಗುರುಮೂರ್ತಿಯವರು ವರದಿಯನ್ನು ಸಲ್ಲಿಸಿದ ಬಳಿಕವೂ ಅದನ್ನು ಬದಿಗೊತ್ತಿ ಹಲವಾರು ಮಂದಿ ಅನರ್ಹ ಉಪನ್ಯಾಸಕರುಗಳನ್ನು ಸೇವಾ ಕ್ರಮಕ್ಕೆ ಒಳಗೊಡಿಸುವ ಆದೇಶಗಳು ಅವ್ಯಾಹತವಾಗಿ ಸರ್ಕಾರದಿಂದ ಹೊರಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ನಾನು ಈಗ ನಿಲ್ಲಿಸಿ, ತಮಗೆ ಆಮೇಲೆ ಕಳುಹಿಸಿಕೊಡುತ್ತೇನೆ. ಈ ರೀತಿಯಲ್ಲಿ ಮಾಡುತ್ತಿರುವ ಅಧಿಕಾರಿಗಳು ಸುಮಾರು ಕೋಟ್ಯಾಂತರ ರೂಪಾಯಿಗಳನ್ನು ಸತ್ತು ಹೋದವರಿಗೂ ಕೊಟ್ಟಿದ್ದಾರೆ,

ಯಾರು ಜೀವಂತವಾಗಿಲ್ಲ ಸತ್ತು ಒಂದೆರಡು ವರ್ಷಗಳೇ ಆಗಿದೆ ಅವರಿಗೂ ಕೂಡ ಸುಮಾರು 1ರಿಂದ 1,25,000 ರೂಪಾಯಿಗಳನ್ನು ಬಿಡುಗಡೆ ಮಾಡಿರತಕ್ಕಂಥ ಈ ಅವ್ಯವಹಾರದ ಬಗ್ಗೆ ಸಮಗ್ರ ತನಿಖೆ ಆಗಬೇಕು. ಮತ್ತು ತಾವು ಏನು ಗುರುಮೂರ್ತಿ ಎನ್ನವವರನ್ನು ನೇಮಕ ಮಾಡಿದ್ದೀರಿ, ಅವರು ಏನು ವರದಿ ಕೊಟ್ಟಿದ್ದಾರೆ, ಆ ವರದಿ ಬಹಿರಂಗವಾಗಬೇಕು. ಆ ವರದಿ ಎಲ್ಲಿದೆಯೋ ಅದನ್ನು ಹೊರಗೆ ತೆಗೆಯಬೇಕು. ಅದನ್ನು ಸದನದಲ್ಲಿ ಇಡುವುದಕ್ಕೆ ಸಮಯವಾಗದೇ ಇದ್ದರೆ ಸದನದ ಸಮಿತಿಗಳಲ್ಲಾದರೂ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಮತ್ತು ತಪ್ಪಿತಸ್ಥ ಅಧಿಕಾರಿಗಳು ಯಾರಿದ್ದಾರೆ, ಇಲ್ಲಿ ಸದನದಲ್ಲಿ ನಾನು ಅವರ ಹೆಸರುಗಳನ್ನು ಹೇಳುವುದು ಬೇಡವೆಂದು ಭಾವಿಸಿದ್ದೇನೆ. ಅದನ್ನು ನಾನು ತಮ್ಮಲ್ಲಿ ಮತ್ತು ಮಾನ್ಯ ಮಂತ್ರಿಗಳಲ್ಲಿ ಹೇಳುವವನಿದ್ದೇನೆ. ಅವರ ಬಗ್ಗೆ ಕಠಿಣವಾದಂತಹ ಕ್ರಮಗಳನ್ನು ತೆಗೆದುಕೊಳ್ಳಿ. ಅವರು ಕೇವಲ ಹಣದ ವಿಚಾರದಲ್ಲಿ ಮಾತ್ರವಲ್ಲ, ಎಲ್ಲಾ ವಿಚಾರಗಳಲ್ಲೂ ಎತ್ತಿದ ಕೈ ಇದ್ದಾರೆ. ಇಂತಹವರು ವಿದ್ಯಾ ಇಲಾಖೆಯಲ್ಲಿ ಇರಬಾರದು. ಇಷ್ಟನ್ನು ತಮ್ಮ ಗಮನಕ್ಕೆ ತರುತ್ತಾ ಈ ಒಂದು ವಿಚಾರದಲ್ಲಿ ಸನ್ಮಾನ್ಯ ಮಂಜುನಾಥರವರು ನಿಜಕ್ಕೂ ಸರಿಯಾದ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಭರವಸೆಯಿಂದ , ನಾನು ಇದನ್ನು ಸ್ವಲ್ಪ ಸಮಯದಲ್ಲಿ ಎತ್ತಿದ್ದೇನೆ. ಇದು ಸಾಧಾರಣ ಗಂಟೆಗಟ್ಟಲೆ ಚರ್ಚೆ ಮಾಡತಕ್ಕಂಥ ವಿಚಾರ. ಅದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ಮಾಹಿತಿಗಳು ನನ್ನ ಹತ್ತಿರ ಇದೆ. ತಾವು ಸರ್ಕಾರದಿಂದ ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಸಿಗದೇ ಇದ್ದರೆ ನಾನು ಅದನ್ನು ತಮಗೆ ಕೊಡುವುದಕ್ಕೆ ಸಿದ್ದನಿದ್ದೇನೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರದಲ್ಲಿ ನಾನು ಈಗಾಗಲೇ ಒಂದು ಹೇಳಿಕೆಯನ್ನು ಅವರಿಗೆ ಕೊಟ್ಟಿದ್ದೇನೆ. ಇವತ್ತಿನ ದಿವಸ ಅವರ ಮುಖ್ಯ ಉದ್ದೇಶ ಏನೆಂದರೆ ಅವರಿಗೆ ಅನುಕೂಲ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ. ಕೆಲವರೆಲ್ಲಾ ಇದರಲ್ಲಿ ಒಂದು ರಾಕೆಟ್ ಇದೆ ಎಂದು ಹೇಳುತ್ತಿದ್ದಾರೆ. ಅದನ್ನು ತಿಳಿಸಿದರೆ, ನಿಜವಾಗಲೂ ಖಂಡಿತವಾಗಿಯೂ ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ ದಿನಾಂಕ 21-1-1992ರ ಹಿಂದೆ ಯಾರು 3 ವರ್ಷ ಕೆಲಸ ಮಾಡಿದ್ದರು ಸುಪ್ರೀಂಕೋರ್ಟ್ ಆರ್ಡರ್ ಪ್ರಕಾರ ರೆಗ್ಯೂಲರ್ ಮಾಡಬೇಕು ಎಂದಾಯಿತು. ಅದರ ಪ್ರಕಾರ ಮಾಡಿದೆ. ಅದರಲ್ಲಿ ಇನ್ನೂ ಕೆಲವರು ಉಳಿದಿದ್ದಾರೆ. ಉಳಿದಂತಹವರು ಏನು ಮಾಡಿದ್ದಾರೆಂದರೆ ಅವರೆಲ್ಲಾ ನಮ್ಮನ್ನು ಮಾಡಿ ಎಂದು ಕೋರ್ಟಿ ಹೋದರು. ಆದರೆ ಅದು ತಿರಸ್ಕೃತವಾಯಿತು. ಆದರೂ ಸಹ ನಾವು ಅವರನ್ನು ತೆಗೆದು ಹಾಕಲಿಲ್ಲ. ಅವರನ್ನು ಅಲ್ಲೇ ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದೇವೆ. ಅವರು ಕೆಲವು ವರ್ಷಗಳಿಂದ ಅಲ್ಲಿ ಕೆಲಸ ಮಾಡಿದ್ದಾರೆ, ಆದ್ದರಿಂದ ಅವರನ್ನು ಮನೆಗೆ ಕಳುಹಿಸಬಾರದು ಎನ್ನುವ ದೃಷ್ಟಿಯಿಂದ, ಅವರಿಗೆ ಅನುಕೂಲ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಸಹಾಯ ಮಾಡಬೇಕು ಎಂದು

ಮಾಡುತ್ತಿದ್ದೇವೆ. ಇವತ್ತು ಕೋರ್ಟ್ ಆರ್ಡರ್ ಪ್ರಕಾರ ಅವರನ್ನು ತೆಗೆಯ ಬಹುದಾಗಿತ್ತು, ಆದರೂ, ಸಹ ನಾವು ಅವರನ್ನು ತೆಗೆಯಲಿಲ್ಲ. ಈಗ ಇದನ್ನು ಮಾಡಬೇಕು ಎಂದರೆ ನಮಗೆ ಸಂಖ್ಯೆ ವಿಪರೀತ ಬಂದುಬಿಡುತ್ತದೆ. ನಾನು ಕೆಲಸ ಮಾಡಿದ್ದೇನೆ, ನಾನು ಕೆಲಸ ಮಾಡಿದ್ದೇನೆ ಎಂದು ಬರುತ್ತದೆ. ಅನುದಾನಿತ ಕಾಲೇಜುಗಳಲ್ಲಿ ಕೆಲವು ಪ್ರಾಂಶುಪಾಲರುಗಳು ಇದ್ದಾರೆ ಅವರು ಏನು ಮಾಡುತ್ತಾರೆಂದರೆ ಇಲ್ಲದ್ದೆಲ್ಲಾ ಸೇರಿಸಿಬಿಟ್ಟು ಮತ್ತೆ ಕಳುಹಿಸಿತ್ತಾರೆ. ಈ ರೀತಿಯಾಗಿ ಸಂಖ್ಯೆ ಜಾಸ್ತಿಯಾಯಿತು. ಅದಕ್ಕೆ ನಾವು ಏನು ಮಾಡಿದೆವು ಎಂದರೆ ಗುರುಮೂರ್ತಿಯವರನ್ನು ಕಳುಹಿಸಿದೆವು. ಅವರಿಗೆ ಎಲ್ಲಾ ಕಾಲೇಜುಗಳಿಗೆ ಹೋಗಿಬಿಟ್ಟು ತನಿಖೆ ಮಾಡಬೇಕು, ನಿಜವಾಗಿಯೂ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿ ಎಂದು ಹೇಳಿದೆವು. ಸುಪ್ರೀಂಕೋರ್ಟ್ ಆರ್ಡರ್ ಪ್ರಕಾರ ಅವರಿಗೆ ಅನುಕೂಲ ಆಗದೇ ಇದ್ದರೂ ಅವರಿಗೆ ಏನಾದರೂ ಪರಿಹಾರ ಕೊಡಬೇಕು ಎನ್ನುವ ದೃಷ್ಟಿಯಿಂದ ನಾವು ಮಾಡಿದ್ದೇವೆ. ಅದಕ್ಕೊಸ್ಕರ ನಮ್ಮ ಪ್ರಿನ್ಸಿಪಲ್ ಸೆಕ್ರೆಟರಿಯವರಾದ ಜೆ.ಪಿ. ಶರ್ಮಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದೆವು. ಆ ಸಮಿತಿ ರಿಪೋರ್ಟ್ ಈಗಾಗಲೇ ಬಂದಿದೆ. ಈಗ ಅದನ್ನು ಪರಿಶೀಲನೆ ಮಾಡಿ ಹಣಕಾಸು ಇಲಾಖೆಗೂ, ನ್ಯಾಯಾಂಗ ಇಲಾಖೆಗೂ ಕಳುಹಿಸಿ ಅದನ್ನು ನಾನು ಕ್ಯಾಬಿನೇಟ್ ಮುಂದೆ ತರಬೇಕು. ಅವರಿಗೆಲ್ಲಾ ಅನುಕೂಲ ಮಾಡುವ ದೃಷ್ಟಿಯಂತೂ ನನಗೆ ಇದೆ. ನಾವು ಆಗಲೇ ತೆಗೆದು ಹಾಕಿದ್ದರೆ ಅವರು ಮನೆಗೆ ಹೊಗಿಬಿಡುತ್ತಿದ್ದರು. ಆದರೆ ಧೈರ್ಯ ಮಾಡಿ ಏನಾದರೂ ಅನುಕೂಲ ಮಾಡೋಣ ಎಂದು ಮಾಡಿದ್ದೇವೆ. ಅದಕ್ಕೋಸ್ಕರ ಮಾನ್ಯ ಶಿವಪ್ಪನವರು ನಮಗೆ ಶಹಭಾಸಗಿರಿ ಕೊಡಬೇಕು.

ಶ್ರೀ ಬಿ.ಬಿ. ಶಿವಪ್ಪ : ತಾವು ಅನುಕೂಲ ಮಾಡಿದಿರಿ, ಅನುಕೂಲ ಮಾಡುವ ಗಾಬರಿಯಲ್ಲಿ ಎಲ್ಲರಿಗೂ ಅನಾನುಕೂಲ ಮಾಡುತ್ತಿದ್ದೀರಿ.

ಶ್ರೀ ಡಿ. ಮಂಜುನಾಥ್ : ಅದನ್ನು ಪತ್ತೆ ಹಚ್ಚಿದ್ದೇವೆ. ಅದರಲ್ಲಿ ಕೆಲವರು ಕೆಲಸವನ್ನು ಮಾಡಿಲ್ಲ ಸತ್ತು ಹೋಗಿದ್ದಾರೆ. ಅವರನ್ನು ಸಹ ಪಟ್ಟಿಯಲ್ಲಿ ಸೇರಿಸಿದ್ದಾರೆ. ನೀವು ಹೇಳುವುದು ನಿಜ. ನಾನು ಪೂರ್ಣ ತನಿಖೆ ಮಾಡಿಸುತ್ತಿದ್ದೇನೆ. ಆದುದರಿಂದ ನಿಮಗೆ ಇಷ್ಟು ಭರವಸೆ ಕೊಡುತ್ತೇನೆ, ಯಾವ್ಯಾವ ಅಧಿಕಾರಿಗಳು ಇದರಲ್ಲಿ ಇದ್ದಾರೆ ಎನ್ನುವುದು ನಿಮಗೆ ಗೊತ್ತಿದೆಯೆಂದು ಹೇಳಿದಿರಿ, ಗೊತ್ತಿದ್ದರೆ ದಯವಿಟ್ಟು ನನಗೆ ಹೇಳಿ. ನಾನು ಖಂಡಿತವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಗುರುಮೂರ್ತಿಯವರ ಏಕ ಸಮಿತಿ ಆಯೋಗ ಮಾಡಿದಿರಲ್ಲ ಅವರ ತನಿಖೆ ಈಗಾಗಲೇ ಮುಗಿದಿರಬೇಕಲ್ಲ!

ಅಧ್ಯಕ್ಷರು : ಇಲಾಖಾ ಬೇಡಿಕೆಗಳು ಬರುತ್ತದೆ, ಆಗ ಸಂಪೂರ್ಣವಾಗಿ ಚರ್ಚೆ ಮಾಡಿ.